ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿ.:742/2024
ಸಿ.ಡಬ್ಲ್ಯು 5 ಪಿ.ಡಬ್ಲೂ : 3

| | |
|---|---|
| ಸಾಕ್ಷಿದಾರರ ಹೆಸರು | ಪ್ರಶಾಂತ್ |
| ತಂದೆಯ ಹೆಸರು | ಬಾಬು ಆಚಾರ್ಯ |
| ವಯಸ್ಸು | 48 ವರ್ಷ |
| ಉದ್ಯೋಗ | ಖಾಸಗಿ |
| ವಾಸಸ್ಥಳ | ಮಂಗಳೂರು |

ದಿನಾಂಕಃ 15-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಚಾಸಾ 1ರವರ ಪರಿಚಯ ಇದೆ. ಅವರು ಚಾಸಾ 8ರವರ ಮಂಗಳೂರಿನ ವರ್ಕ್ ಶಾಪ್ನಲ್ಲಿ ಸುಮಾರು 5-6 ತಿಂಗಳ ಕಾಲ ಚಿನ್ನದ ಕೆಲಸನ್ನು ಮಾಡುತ್ತಿದ್ದರು. ಆರೋಪಿತರ ಪರಿಚಯ ಇರುವುದಿಲ್ಲ. ಚಾಸಾ 1ರವರು ಯಾವುದೇ ವಿಷಯವನ್ನು ನನಗೆ ಹೇಳಿರುವುದಿಲ್ಲ. ಪೊಲೀಸಿನವರು ನನ್ನನ್ನು ವಿಚಾರಿಸಿ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಆರೋಪಿತರು ಚಾಸಾ 1ರವರಿಗೆ ಬೆದರಿಸಿ ಹಣ ವಸೂಲಿ ಮಾಡಿಕೊಂಡಿರುವ ವಿಚಾರ ನನಗೆ ಗೊತ್ತಿಲ್ಲ.

**ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿ ಕೂಲ ಸಾಕ್ಷಿ ಎಂದು ತಿಳಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ ಅನುಮತಿಯನ್ನು ನೀಡಲಾಯಿತು.**

**ಪಾಟೀ ಸವಾಲುಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ 1ರವರು ಮತ್ತು ಆರೋಪಿತರು ಸ್ನೇಹಿತರಾಗಿದ್ದರು ಎಂದರೆ ಗೊತ್ತಿಲ್ಲ. ಚಾಸಾ 1 ಹಾಗೂ ಆರೋಪಿತರು ಕೆಲಸದ ಬಿಡುವಿನ ವೇಳೆ ಕೆಲವು ಹೊಟೇಲುಗಳಲ್ಲಿ ರೂಮನ್ನು ಮಾಡಿಕೊಂಡು ಪಾರ್ಟಿ ಮಾಡುತ್ತಿದ್ದರು ಎಂದರೆ

ನನಗೆ ಗೊತ್ತಿಲ್ಲ. ಚಾಸಾ 1 ರವರು ಆರೋಪಿತರ ವಿರುದ್ಧ ನೀಡಿದ ದೂರಿನ ಬಗ್ಗೆ ನಿಮಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಚಾಸಾ 1 ರವರು ನಿಮಗೆ ಸುಮಾರು 4 ವರುಷದ ಹಿಂದೆ ಕೆಲಸ ಮಾಡುತ್ತಿರುವಾಗ ಆರೋಪಿತರು ಒಂದು ದಿನ ಪಾರ್ಟಿ ಮಾಡಲು ಬಲ್ಮಟದಲ್ಲಿರುವ ರೂಪ ಲಾಡ್ಜಗೆ ಕರೆದುಕೊಂಡು ಹೋಗಿ ಮಧ್ಯಪಾನ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಮಧ್ಯಪಾನ ಮಾಡಿಸಿ ಮಲಗಿಸಿದ ನಂತರ ಅವರ ನಗ್ನ ಭಾವಚಿತ್ರವನ್ನು ತೆಗೆದು ಭಾವಚಿತ್ರವನ್ನು ಪೇಪರ್ ನಲ್ಲಿ ಹಾಕಿಸಿ ಮರ್ಯಾದೆ ತೆಗೆಯುತ್ತೇವೆ ಎಂದು 7 ಲಕ್ಷ ಹಣವನ್ನು ವಸೂಲಿ ಮಾಡಿಕೊಂಡರು ಎಂದು ನಿಮಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ದಿಃ 13-05-2014 ರಂದು 1 ನೇ ಆರೋಪಿಯವರು ಹಣ ಪಡೆಯಲು ಪಡುಬಿದ್ರಿಗೆ ಬಂದಾಗ ಪೊಲೀಸಿನವರು ಅವರನ್ನು ದಸ್ತಗಿರಿ ಮಾಡಿ ಪ್ರಕರಣ ದಾಖಲಿಸುವ ವಿಚಾರ ನಿಮಗೆ ತಿಳಿಯಿತು ಎಂದರೆ ಸರಿಯಲ್ಲ. ಈ ವಿಚಾರವಾರಿ 20-05-2014 ರಂದು ನಿಮ್ಮನ್ನು ಪೊಲೀಸಿನವರು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ 10 ಎಂದು ಗುರುತಿಸಲಾಯಿತು. ಆರೋಪಿಯವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1, 3 ರಿಂದ 6 ನೇ ಆರೋಪಿತರ ಪರವಾಗಿ ಶ್ರೀ ಎಂ. ಡಿ ವಕೀಲರಿಂದಃ**

ಪಾಟೀ ಸವಾಲು ಇಲ್ಲವೆಂದು ಮನವಿ ಮಾಡಿರುತ್ತಾರೆ.

**ಪಾಟೀ ಸವಾಲುಃ 7 ರಿಂದ 10 ನೇ ಆರೋಪಿತರ ಪರವಾಗಿ ಶ್ರೀ ಎಂ.ಕೆ . ವಕೀಲರಿಂದಃ**

ಪಾಟೀ ಸವಾಲು ಇಲ್ಲವೆಂದು ಮನವಿ ಮಾಡಿರುತ್ತಾರೆ.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ ಉಡುಪಿ.